**ಓ.ಎಸ್.209/2017**

**ಡಿ.ಡಬ್ಲ್ಯೂ.1**

**ದಿನಾಂಕಃ09-06-2022 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**<u>ಮುಂದುವರಿದ ಪಾಟೀ ಸವಾಲುಃ ಶ್ರೀ ಸಿ.ವಿ.ಎಸ್. ವಕೀಲರಿಂದಃ-</u>**

ವಾದಿಯ ತಂದೆಯಾದ ದಸ್ತಗಿರಿ ಸಾಬ್ ಅವರ ತಂದೆಯ ಹೆಸರು ಹುಸೇನ್ ಸಾಬ್. ನನ್ನ ತಂದೆಯ ತಂದೆ ಹೆಸರು ಖಲಂದರ್ ಸಾಬ್. ನಿಪಿ-1 ಮತ್ತು ನಿಡಿ-1 ರ ದಾಖಲೆಯಲ್ಲಿ ದಸ್ತಗೀರ್ ಸಾಬ್ ಬಿನ್ ಹುಸೇನ್ ಸಾಬ್ ಎಂದು ನಮೂದುಇದೆ ಅಂದರೆ ಸರಿ. ನಿಪಿ-6 ರ ಪ್ರಕಾರ ಹುಸೇನ್ ಸಾಬ್ ಅವರಿಗೆ 6 ಜನ ಮಕ್ಕಳು ಅಂದರೆ ಸರಿ. ವಾದಿ ಅವರ ತಂದೆಯ ಮೂರನೇ ಮಗ ಅಂದರೆ ಸರಿ.

**ಡಿ.ಡಬ್ಲ್ಯುಃ.1**

ವಾದಿಯ ಕುಟುಂಬಕ್ಕೂ ನಮಗೂ ಯಾವುದೇ ಸಂಬಂಧ ಇಲ್ಲ ಅಂದರೆ ಸರಿಯಲ್ಲ. ಹುಸೇನ್ ಸಾಬ್ ನನಗೆ ಮುತ್ತಜ್ಜ ಆಗಬೇಕು. ನಿಪಿ-6 ರಲ್ಲಿ ನಮೂದು ಇರುವ ಎಲ್ಲರೂ ಸಹ ನನ್ನ ಸಂಬಂಧಿಕರಾಗಿರುತ್ತಾರೆ. ವಾದಿಯ ತಂದೆಯ ತಂದೆ ನನಗೆ ಅಜ್ಜನಾಗಬೇಕು ಎಂದು ತೋರಿಸಲು ದಾಖಲೆ ಇದೆ, ಆದರೆ ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ವಾದಿಯ ಅಜ್ಜ ಹುಸೇನ್ ಸಾಬ್ ಮತ್ತು ನನ್ನ ಅಜ್ಜ ಹುಸೇನ್ ಸಾಬ್ ಬೇರೆ ಬೇರೆ ಅಂದರೆ ಸರಿಯಲ್ಲ. ಅವರಿಬ್ಬರೂ ಅಣ್ಣ-ತಮ್ಮಂದಿರಾಗಿರುತ್ತಾರೆ.

2. ನಾನು ಮನೆ ಕಟ್ಟಿದೇನೆ ಎಂದು ಹೇಳುವ ಆಸ್ತಿಯ ಪೂರ್ವಕ್ಕೆಃರಸ್ತೆ, ಪಶ್ಚಿಮಕ್ಕೆಃಕೆಡವಿರುವ ಮನೆಯ 11 ವಿಸ್ತೀರ್ಣ ಖಾಲಿ ನಿವೇಶನ, ನಂತರ ಪ್ಯಾರೇ ಜಾನ್ ಅವರ ಮನೆ, ಉತ್ತರಕ್ಕೆಃಗಲ್ಲಿ ಮತ್ತು ದಕ್ಷಿಣಕ್ಕೆಃರಸ್ತೆ . ಈ ಚಕ್ಕುಬಂದಿಯಲ್ಲಿ ನಾನು ಮನೆ ಕಟ್ಟಿರುತ್ತೇನೆ ಅಂದರೆ ಸರಿ. ಸದರಿ ಆಸ್ತಿ ನನ್ನ ತಾತ ಖಲಂದರ್ ಸಾಬ್ ಅವರಿಗೆ ಬಂದಿದೆ ಎಂದು ತೋರಿಸಲು ನಾನು ನ್ಯಾಯಾಲಯಕ್ಕೆ ದಾಖಲೆ ಹಾಜರುಪಡಿಸಿರುವುದಿಲ್ಲ, ಸದರಿ ಸ್ವತ್ತು ನನಗೆ ವಿಭಾಗದ ಮೂಲಕ ಬಂದಿರುತ್ತದೆ ಎಂದು ಸಾಕ್ಷಿ ನುಡಿಯುತ್ತಾರೆ. ವಿಭಾಗದ ಆದ ಬಗ್ಗೆ ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ. ವಾದಿಯ ತಂದೆ ದಸ್ತಗೀರ್ ಸಾಬ್ ಬಿನ್ ಹುಸೇನ್ ಸಾಬ್ ಅವರು ನಮ್ಮ ಪರವಾಗಿ ಯಾವುದೇ ದಾಖಲೆಯನ್ನು ಬರೆದುಕೊಟ್ಟಿರುವುದಿಲ್ಲ. ನಾನು ಮನೆ ಕಟ್ಟಿರುವ ಆಸ್ತಿ ವಾದಿಯ ಹೆಸರಿನಲ್ಲಿತ್ತು ಅಂದರೆ ಸರಿಯಲ್ಲ, ಅದು ನನ್ನ ಹೆಸರಿನಲ್ಲಿತ್ತು ಎಂದು ನುಡಿಯುತ್ತಾರೆ. ನನ್ನ ಹೆಸರು ಜಿ.ಎಂ.ದಸ್ತಗೀರ್ ಮತ್ತು ನನ್ನ ತಂದೆಯ ಹೆಸರು ಮೊಹಮದ್ ಹುಸೇನ್ ಸಾಬ್ ಅಂದರೆ ಸರಿ. ವಾದಿಯ ಹೆಸರಿಗಿರುವ ಆಸ್ತಿಯ ಖಾತೆ ಸಂಖ್ಯೆ.219 ನ್ನು ನನ್ನ ಹೆಸರಿಗೆ ಅಕ್ರಮವಾಗಿ ಮಾಡಿಸಿಕೊಂಡಿರುತ್ತೇನೆ ಅಂದರೆ ಸರಿಯಲ್ಲ. ಸದರಿ ಆಸ್ತಿಯಲ್ಲಿ ಕಪ್ಪು ಹೆಂಚಿನ ಮನೆ ಇದ್ದು, ಅದು ಬಿದ್ದು ಹೋದ ನಂತರ ನಾನು ಮನೆ ಕಟ್ಟಿರತ್ತೇನೆ ಅಂದೆರ ಸರಿ. ಸದರಿ ಆಸ್ತಿಯು ವಾದಿಗೆ ಸೇರಿತ್ತು ಅಂದರೆ ಸರಿಯಲ್ಲ. ನಾನು ವಾದಿಗೆ ಸೇರಿದ ಆಸ್ತಿಯಲ್ಲಿ ಅಕ್ರಮವಾಗಿ ಮನೆ ಕಟ್ಟಿಕೊಂಡು ಸ್ವಾಧೀನ ಹೊಂದಿದ್ದೇನೆ ಅಂದರೆ ಸರಿಯಲ್ಲ.

<u>ಮರು ವಿಚಾರಣೆಃ ಇರುವುದಿಲ್ಲ.</u>

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)**

ಓ ಹೇ ಕೇ ಸ ಇ ಎ ಓ

ಸಹಿ/-

ಐ/ಸಿ 3 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಃದಃನ್ಯಾಃದಂ.,ರವರು, ಕಡೂರು.